# ಮುಖ್ಯಪ್ರಾಣರ ಮೇಲೆ ಉಗಾಭೋಗಗಳು ಮತ್ತು ಸುಳಾದಿಗಳು

---

- ಹನುಮಾವತಾರಕೆ ಕಾಲಯಮ ಎನಿಸಿದಾ

ಮಣಿಮಾನ ಸುರನಾದಾ ಭೀಮವತಾರಕ್ಕೆ
ಮುನಿ ಮಧ್ವರಾಯನಾಗೆ ಬಣುಗು ಸಂಕರನಾದಾ
ಜನಿಸಿದನು ವೈರವನು ಜನುಮ ಮೂರರಲ್ಲಿ ಬಿಡದೆ
ಅನಿಲದೇವನ ಕೂಡ ಶೆಣೆಸಿ ಸಂಕಟ ಬಟ್ಟು
ಅನುವ ಕಾಣದಲೆ ತಮಸೀನಲ್ಲೀಗ ಬಳಲುತಿಪ್ಪಾ
ಫಣನಾಮ **ವಿಜಯವಿಠಲ** ಹನುಮಂತ ಮತದಂತೆ
ಮನುಜೋತ್ತಮ ಕಡೆ ಮೊದಲು ಮನದಂತೆ ಫಲವೀವಾ ॥

- ಒಬ್ಬ ಆಚಾರ್ಯನು ದೈವವೇ ಇಲ್ಲವೆಂಬ

ಒಬ್ಬ ಆಚಾರ್ಯನು ದೈವಕೆ ಎಂಟು ಗುಣವೆಂಬ
ಒಬ್ಬ ಆಚಾರ್ಯನು ನಿರ್ಗುಣ ನಿರಾಕಾರ ನಿರೂಹನೆಂದು – ತಾನೆ ದೈವವೆಂಬ
ಇವರೊಬ್ಬರೂ ವೇದಾರ್ಥವರಿತೂ ಅರಿಯರು
ಇವರೊಬ್ಬರೂ ಶಾಸ್ತ್ರಾರ್ಥವರಿತೂ ಅರಿಯರು
ಒಬ್ಬ ಮಧ್ವಾಚಾರ್ಯರೆ **ಪುರಂದರ ವಿಠಲನೊಬ್ಬನೆ**
ಎಂದು ತೋರಿ ಕೊಟ್ಟವರಾಗಿ ॥

- ವೈದಿಕ ಮತದಲಿ ನಡೆದೆವೆಂದು ತಾವು

ವೈಷ್ಣವವಂಬಿಟ್ಟು ಕೊಟ್ಟರು ಕೆಲವರು
ವೈಷ್ಣವ ಮತದಲ್ಲಿ ನಡೆವೆವೆಂದು
ವೈದಿಕವಂ ಬಿಟ್ಟುಕೊಟ್ಟರು ಕೆಲವರು
ವೈದಿಕ ವೈಷ್ಣವ ಒಂದೇ ಎಂದು ಮಧ್ವಮುನಿ
ಪ್ರತಿಪಾದಿಸಿದ **ಪುರಂದರ ವಿಠಲ** ಮೆಚ್ಚ ॥

**ಸಂಗ್ರಹ – ನರಹರಿಸುಮಧ್ವ**

**ಮುಖ್ಯಪ್ರಾಣರ ಮೇಲೆ ಉಗಾಭೋಗಗಳು ಮತ್ತು ಸುಳಾದಿಗಳು**

- ಏಕವಿಂಶತಿ ಕುಭಾಷ್ಯ ದೂಷಕನೆಂಬ

ಬಿರುದು ನಮ್ಮಯ ಗುರುರಾಯಗಲ್ಲದುಂಟೆ
**ಪುರಂದರ ವಿಠಲ ಸ್ತ್ರೋತ್ತ**ಮನೆಂಬ
ಸಿದ್ಧಂತವು ನಮ್ಮ ಗುರು ರಾಯರಿಗಲ್ಲದುಂಟೆ ॥

- ವೈದಿಕ ಧರ್ಮದಲ್ಲಿ ನಡೆದೆವೇಂದು ತಾವು।
  ವೈಷ್ಣವಂ ಬಿಟ್ಟುಕೊಟ್ಟರು ಕೆಲವರು।
  ವೈಷ್ಣವ ಮತದಲ್ಲಿ ನಡೇದೆವೆಂದು।
  ವೈದಿಕವಂ ಬಿಟ್ಟುಕೊಟ್ಟರು ಕೆಲವರು।
  ವೈದಿಕ ವೈಷ್ಣವ ಒಂದೆಂದು ಮಧ್ವಮುನಿ
  ಪ್ರತಿಪಾದಿಸಿದ ಪುರಂದರ ವಿಠಲ ಮೆಚ್ಚೆ ।

- ಕಲಿಯುಗದಲ್ಲಿ ತುರಿಯಾಶ್ರಮವನೆ ಧರಿಸಿ।
  ಕಲುಷರಾದ ಮಾಯಿಗಳ ಸೋಲಿಸಿ।
  ಖಿಲವಾದ ಮಧ್ವಮತವನ್ನು ಬಲಿದೆಂದೆನಿಸಿ
  ಕಾಗಿ ನೆಲೆಯಾದಿ ಕೇಶವನೆ ಪರದೈವವೆನಿಸಿ
  ಪರಮ ಪದವೀವ ಗುರುಮುಖ್ಯಪ್ರಾಣ।
  (ಶ್ರೀ ಕನಕ ದಾಸರು)

- ಈತನೇ ಹನುಮನು ಈತನೇ ನಮ್ಮ ಗುರು ।

ಲಂಕೆಯ ಸಖಿಗೆ ನಿಶ್ಯಂಕೆಯಲುಣಿಸಿದಾ ।
ಕೌರವ ಬಲದ ಕುಠಾರಿಯೆಂದೆನಿಸಿದಾ ।
ಮೂರೇಳು ದುರ್ಭಾಷ್ಯ ಹಾರಿಸಿದಾ ಮುನಿ ।
ಹರಿಮತ ಸ್ಥಾಪನ ಬಿರುದಾಂಕ ದೇವನು ।
**ಗುರು ಮಹಿಪತಿ** ಜನರನುದ್ಧರಿಸಿದ ದೇವನು ॥

**ಸಂಗ್ರಹ – ನರಹರಿಸುಮಧ್ವ**

## ಮುಖ್ಯಪ್ರಾಣರ ಮೇಲೆ ಉಗಾಭೋಗಗಳು ಮತ್ತು ಸುಳಾದಿಗಳು

- ಗದೆಯಿಂದ ಅರಿಗಳ ಸದೆಬಡಿದ

ಮುದದಿಂದಲಿ ಅದ್ರಿವೊದಗಿ ತಂದ ಹಸ್ತ
ಕದನದೊಳಗೆ ಮಾಗಧನ ಸೀಳಿದ ಹಸ್ತ
ಮದನೃಪನನುಜನ ಉರವ ಬಗೆದ ಹಸ್ತ
ಸುದತಿಯ ತುರುಬು ಕಟ್ಟಿದ ಕರುಣ ಹಸ್ತ
ಪದೋಪದಿಗೆ ನಮ್ಮ **ವಿಜಯವಿಠಲನ್ನ**
ಸದಮಲ ಭಕ್ತಾ ಎನಗೆ ಪೊಳೆವ ಹಸ್ತ

- ರಾವಣನು ರಥವೇರಿ ರಣಕೆ ಬಂದಿರಲಾಗಿ

ನೀವು ಪಾದಚಾರಿಯಾಗಿ ಭೂಮಿಯಲ್ಲಿರಲು
ನಮ್ಮ ಹನುಮಂತನು ನಿಮ್ಮನು ಕಂಡು
ಚಾಲ್ವರಿದು ಬೊಬ್ಬಿರಿದು ಕುಣಿಕುಣಿದಾಡಿ
ಸುಖವ ಸೂರೆಯ ಮಾಡಿ ಎತ್ತಿರಲು
ನಮ್ಮ ಹಿರಿಯ ನಿಮ್ಮ ವೇಲೆಗೊದಗಿರಲಾಗಿ
ನಮ್ಮ ನೀ ಮರೆಯಲಾಗದು **ಪುರಂದರ ವಿಠಲ ॥**

- ಬರುವುದು ಬುದ್ಧಿಯು ಬಲವು ಕೀರುತಿಯು

ನಿರುತದಿ ಧೈರ್ಯವು ನಿರ್ಭಯತ್ವವು
ಆರೋಗ್ಯಾನಂದ ಅಜಾಡ್ಯ ವಾಕ್ಪಟುತ್ವವು
ಹರೇ **ರಂಗವಿಠಲ** ಹನುಮಾ ಎನಲು ॥

**ಸಂಗ್ರಹ – ನರಹರಿಸುಮಧ್ವ**

# ಮುಖ್ಯಪ್ರಾಣರ ಮೇಲೆ ಉಗಾಭೋಗಗಳು ಮತ್ತು ಸುಳಾದಿಗಳು

- ಹನುಮ ಭೀಮ ಮಧ್ವಮುನಿಯ

ಗುಣಧಾಮ ಹರಿಪಾದ ಸೇವೆಯೊಳಧಿಕ ಪ್ರೇಮ
ಅಂಜನೇ ವರಪುತ್ರ ಅಕಳಂಕ ಚರಿತ್ರ
ಸಂಜೀವ ಗಿರಿಧರನೆ ಸಾಧುವರನೆ
ಸೀತೆಗುಂಗುರವಿತ್ತು ಪ್ರೀತಿಪಡಿಸಿದ ಹನುಮ
ರಾಮದೂತನೆಂದು ಎನಿಸಿಕೊಂಡಿ
ಶರಣು ಶರಣೆಂಬೆ ನಾ ನಿನ್ನ ಚರಣಗಳಿಗೆ
ದುಷ್ಟಸಂಹಾರ ಭಕ್ತರುದ್ಧಾರ **ಹಯವದನ** ದೂತ ದುರಿತ ದೂರ ॥

- ಮಧ್ವರಾಯರ ಭಾಗ್ಯ ಎಂಥದೊ ವರ್ಣಿಸಲು

ಶುದ್ಧಸತ್ತ್ವಾತ್ಮಕವಾದ ಶರೀರವು
ಅದ್ವೈತಮತವೆಂಬೊ ಅರಣ್ಯವ ಪೊಕ್ಕು
ವಿಧ್ವಂಸ ಮಾಡಿ ವಾದಿಗಳನೆ ಗೆದ್ದು
ಪದ್ಧತಿ ತಪ್ಪದಂತೆ ಮತವನುದ್ಧರಿಸಿ
ವೃದ್ಧಿಗೈಸಿದರು ಸರ್ವಸಜ್ಜನರನ್ನು
ಸಿದ್ದರಾವೆಂದು ಗೀರ್ವಾಣರೆಲ್ಲರು
ಎದ್ದೆದ್ದು ಕುಣಿದರು ಕರವ ಹೊಡೆದು
ವಿದ್ವಾಂಸನಾನೆಂದು ಅಹಂಕರಿಸಿದೆ ಇವರ
ಪಾದಪದ್ಮದಲ್ಲಿ ಅತಿದೃಡಭಕುತಿ ಮಾಡಿ
ಮಧ್ವರಾಯರೆ ನಮಗೆ ಉದ್ಧಾರಕರೆಂದು
ಪದೇಪದೆಗೆ ತಿಳಿದು ಕೊಂಡಾಡಿದರೆ
ಸಿದ್ಧಿದಾಯಕ ಸಿರಿ **ಮೋಹನ ವಿಠಲ**
ಹೃದ್ದೃಷ್ಟಿಯಲಿ ನಿಂತು ಸಲಹುವನು ಬೇಗ ॥

**ಸಂಗ್ರಹ – ನರಹರಿಸುಮಧ್ವ**

# ಮುಖ್ಯಪ್ರಾಣರ ಮೇಲೆ ಉಗಾಭೋಗಗಳು ಮತ್ತು ಸುಳಾದಿಗಳು

- ಭಾರತೀಪತಿ ಎನ್ನ ಭಾರವ ಪರಿಹರಿಸಿ

ಸಾರಿಸಾರಿಗೆ ಹರಿಪಾದ ಸ್ಮರಣೆಯನು
ಆರಾಧನೆಗೆ ಮಾತ್ರ ದಾರಿ ತೋರಿಸಿ ನೀನು
ಸಂಸಾರಾಂಬುಧಿ ಎಂಬ ವಾರಿಧಿ ದಾಟಿಸಿ
ಪೂರೈಸು ಮನೋಭೀಷ್ಟ ಪೂರ್ಣಪ್ರಜ್ಞನೆ
ಈರೇಳು ಲೋಕದಲಿ ಸರ್ವಜೀವರೊಳು ನಿಂತು
ಮೂರೇಳು ಸಾವಿರದಾರುನೂರು ಜಪ
ಬೇರೆ ಬೇರೆ ಮಾಡುವಿ ಶ್ರೀ ಹರಿಯಾಜ್ಞದಿ
ಆರುಮೂರು ಭಕುತಿ ವಾರವಾರಕೆ ಕೊಟ್ಟು
ಆರು ಮಾರ್ಗವ ಬಿಡಿಸೊ ಅಸುರಮರ್ದನನೆ
ಕಾರನಕರ್ತ **ಮುದ್ದುಮೋಹನ** ವಿಠಲನ್ನ ಹೃದ್ಧಾಮದೊಳು
ತೋರೊ ಧೀರ ಗುರುಮಧ್ವಮುನಿರಾಯ ॥

- ಎನ್ನೊಡನೆ ಹನುಮ

ಹನುಮನೇ ಎನ್ನೊಡೆಯ ಘನ್ನಕದರುಮಂಡಲಗಿ
ಹನುಮಯ್ಯ ಎನ್ನ ಒಡೆಯ
ಎನ್ನಯ್ಯ **ಶ್ರೀ ತಂದೆ ಮುದ್ದುಮೋಹನ ವಿಠಲ** ಭಕ್ತ
ಘನ್ನ ಹನುಮಯ್ಯನೇ ಎನ್ನ ಒಡೆಯ ॥

## ಮುಖ್ಯಪ್ರಾಣರ ಮೇಲೆ ಉಗಾಭೋಗಗಳು ಮತ್ತು ಸುಳಾದಿಗಳು

- ಪಂಚಪಾಂಡವರೊಳಗೆ ಪಂಚಮುಖ ಒಡೆಯನೆ

ಪಂಚರೂಪಗಳಲ್ಲಿ ಪಂಚ ಅಗ್ನಿಯ ತಿಳಿದು

ಪಂಚ ಆಹುತಿ ನೀಡೆ ಪಂಚಮುಕುತಿಪ್ರದನೆ

ಪಂಚ ಜೀವರ **ಗುರು ತಂದೆ ಗೋಪಾಲವಿಠಲ** ದೂತ

ಪಂಚಭೇದವನು ತಿಳಿಸೊ ಪ್ರಾಣ ॥

- ಅಖಿಲ ಬೊಮ್ಮಾಂಡನಾಯಕ ಸಕಲ ಜೀವೋತ್ತಮ

ವಿಖನಸಾರ್ಚಿತಪಾದ ನಿಖಿಳಲೋಕ ವ್ಯಾಪ್ತ

ಲಕುಮಿರಮಣನ ಪ್ರಾಣಸಂಭೂತ

ಸುಖಜ್ಞಾನಮಯ ಸ್ವರೂಪ ಸುಮನಸೋತ್ತಂಸ

ಶಿಖಿಸಖೋದಿತರದಿ ಪ್ರಕರ ಸನ್ನಿಭಮುಖ

ಸುಖಪೂರ್ಣ ಶುದ್ಧ ಸತ್ತ್ವ ಶರೀರ

ಆಖಣಾಶ್ಮ ಸಮಚರಣ ಭಕ್ತಾಭರಣ

ಲೋಕೈಕವೈದ್ಯ ಭಾರತೀಕಾಂತಾ–

ಲೌಕಿಕ ಸುಖದಾತಾ ಪ್ರಖ್ಯಾತಾ

ಕಾಕೋದರ ಶಾಯಿ ನಮ್ಮ **ಗುರು ಜಗನ್ನಾಥ ವಿಠಲ** ನಾ–

ಲೋಕವನಿತ್ತು ಪೊರೆಯೋ ಪ್ರಾಣರಾಯ ॥

## **ಮುಖ್ಯಪ್ರಾಣರ ಮೇಲೆ ಉಗಾಭೋಗಗಳು ಮತ್ತು ಸುಳಾದಿಗಳು**

- ಏಸು ಕಾಲದಿ ಹರಿಗೆ ದಾಸನು ನೀನಹುದು

ಆಸು ಕಾಲದಲ್ಲಿ ನಾ ನಿನ್ನ ದಾಸ
ದೇಶ ಕಾಲಾ ವೇದದಲ್ಲಿ ಲಿಂಗಾವರಣ ಪ್ರಕೃತಿ
ಈ ಸಮಸ್ತ ಜೀವರಲ್ಲೀ ವ್ಯಾಪ್ತ
ಏಸೇನು ಜನ್ಮದಲಿ ಮಾಡಿದಂಥಾ ಕರ್ಮ
ದೋಷರಾಶಿಗಳ ನಾಶನವಗೈಸೀ
ಈ ಸಮಯದಲಿ ನಿನ್ನ ದಾಸನೆಂದೆನಿಸೆನ್ನ
ಪೋಷಿಸಲಿಬೇಕು **ಶ್ರೀಶ ಗುರು ತಂದೆ ಗೋಪಾಲವಿಠಲ**
ದಾಸದಾಸದಾಸರ ದಾಸ ದಾಸನೆಂದೆನಿಸೊ ॥

- ನೀನೆ ಹರಿ ಹರೆಮಗನು ನಿನ್ನ ಮಗ ಖಗ ಶೇಷ

ನಿನ್ನ ಮೊಮ್ಮಗ ಇಂದ್ರ ನಿನ್ನ ಮರಿಮಗ ಪ್ರಾಣ
ನಿನ್ನ ಗಿರಿ ಮಕ್ಕಳು ಗುರು ಭೃಗು ಮೊದಲಾದ
ನೀನೆ ಸುರರಿಗೆ ಒಡೆಯ ನೀನೆ ಸುರಧೇನು
ನೀನೆ ಕಲ್ಪದ್ರುಮ ನೀನೆ ಚಿಂತಾಮಣಿ
ನಿನ್ನ ಧ್ಯಾನಿಸುವವರಿಗೆ ನೀನೆ **ಗುರು ತಂದೆ ಗೋಪಾಲವಿಠಲ**
ಧ್ಯಾನವನು ಕೊಟ್ಟು ಸಲಹೊ ಪ್ರಾಣ ॥

## **ಮುಖ್ಯಪ್ರಾಣರ ಮೇಲೆ ಉಗಾಭೋಗಗಳು ಮತ್ತು ಸುಳಾದಿಗಳು**

- ಮೂರು ಧರ ಧರ ಧರನೆ ಧಾರನಾಗಿ ಜಗಕೆ

ಮೂರು ಜೀವರಲ್ಲಿ ಮೂರಾರು ಸಾವಿರದ

ಮೂರು ಆರು ನೂರು ಮೂರು ಐದು ಝೂವಿನಲಿ

**ಗುರು ತಂದೆ ಗೋಪಾಲವಿಠಲ**ದಾಸ

ಮೂರು ಕಾಲದಲಿ ಸಲಹೊ ಪ್ರಾಣ ॥

- ಹರಿಗೆ ಅನ್ನವು ಪ್ರಾಣ ಭಗವತ್ಕರ್ಮದಲ್ಲಿ

ಹರಿಗೆ ಅನ್ನ ಅಪಾನ ಅನ್ಯಕರ್ಮತ್ಯಾಗದಲಿ

ಹರಿಗೆ ಅನ್ನವು ವ್ಯಾನ ನಿರೋಧ ನಿಧಿದ್ಯಾಸನದಲಿ

ಹರಿಗೆ ಅನ್ನವು ಉದಾನ ಯೋಗಧಾರಣದಲಿ

ಹರಿಗೆ ಅನ್ನ ಸಮಾನ ವಾಗೀಂದ್ರಯನಿಯಾಮದಲಿ

ಹರಿಗೆ ಈ ಪರಿ ಅನ್ನತ್ವ **ಗುರು ತಂದೆ ಗೋಪಾಲವಿಠಲ**

ಪ್ರೀತದೂತ ಪ್ರಾಣನ ಲೀಲಾ ॥

- ಚತುರದೇಹದಿ ವ್ಯಾಪ್ತ ಚತುರಮೋಕ್ಷಪ್ರದ

ಚತುರ ಉಪಾಸಕನೆ ಚತುರಮಣರಹಿತಾ

ಚತುರಾಶ್ರಮೋದ್ಧರನೆ ಚತುರರ್ಧವರ್ಣನೆ

ಚತುರದಶ ಇಳೆವ್ಯಾಪ್ತ ಚತುರಗುಣ ಪೂರ್ಣನಿಧಿ

ಚತುರಯೋಗಿಗಳೊಡೆಯ ಚತುರದೈತ್ಯರ ಬಡವ

ಚತುರ **ಗುರು ತಂದೆ ಗೋಪಾಲವಿಠಲ** ಪ್ರೀಯ

ಚತುರಮತಿಯಿತ್ತು ಸಲಹೊ ಪ್ರಾಣ ॥

**ಸಂಗ್ರಹ – ನರಹರಿಸುಮಧ್ವ**

# ಮುಖ್ಯಪ್ರಾಣರ ಮೇಲೆ ಉಗಾಭೋಗಗಳು ಮತ್ತು ಸುಳಾದಿಗಳು

- ಹರಿಯು ತುಷ್ಟನಾಗಿ ಪರಮೇಷ್ಠಿಗೆ ಪೇಳ್ದ

ಪರಮೇಷ್ಠಿ ಒಲಿದು ಸೂರ್ಯಂಗೆ ಪೇಳ್ದ
ಕರುಣಿಸಿ ಸೂರ್ಯ ಯಾಜ್ಞವಲ್ಕ್ಯರಿಗೆ ಪೇಳ್ದಿನೊ
ಅರಿವುದು ಉದ್ಗೀಥ ಬ್ರಾಹ್ಮಣ ಇದೇ
ಆರು ಈ ವಿದ್ಯೆವನು ಪೇಳಿ ಕೇಳ್ದವರಿಗೆ
ದಾರಿದ್ರ್ಯ ಭವರೋಗ ದುಃಖ ಕಳೆದೂ
ಬಾರಿಬಾರಿಗೆ ಬೇಡಿದಿಷ್ಟಾರ್ಥಗಳ ಕೊಟ್ಟು
ಧೀರ **ಗುರು ತಂದೆ ಗೋಪಾಲವಿಠಲ** ದೂತ
ಕಾರುಣ್ಯದಿಂದ ಸಲಹೊ ಪ್ರಾಣಾ ॥

- ದುಷ್ಟದೈತ್ಯರು ಬಹಳ ಸಿಟ್ಟಿನಿಂದ ಬಂದು

ಘಟ್ಟಿಬೆಟ್ಟಗಳಲ್ಲಿ ಶ್ರೇಷ್ಠಸುರನಿಗೆ ಹೊಡೆಯ
ಬೆಟ್ಟಕ್ಕೆ ಬಿಗಿದರೆ ಲೋಷದ ತೆರದಂತೆ
ಮುಷ್ಠಿಯಿಂದಲಿ ಭೀಮ ಪೆಟ್ಟು ಹೊಡೆಯಲಾಗಿ
ನಷ್ಟರಾಗಿ ಖಳರು ದಶದಿಶಿಗೆ ಓಡಿದರು
ಹೃಷ್ಟಮನದಲಿ ಸುರರು ಜಯದುಂದುಭಿಯ ಹೊಡೆಯೆ
ತುಷ್ಟರಾಗಿ ಅವರ ಇಷ್ಟವನು ಸಲಿಸಿ
ಶ್ರೇಷ್ಟ ಗುರು ತಂದೆ ಗೋಪಾಲವಿಠಲನ ಮನ
ಮುಟ್ಟಿ ಭಜಿಸುವ ಪ್ರಾಣನೆ ಸಲಹೊ ॥

## ಮುಖ್ಯಪ್ರಾಣರ ಮೇಲೆ ಉಗಾಭೋಗಗಳು ಮತ್ತು ಸುಳಾದಿಗಳು

- ಮಾರುತಿ ನಿನ್ನ ನಿರುತದಿ ಭಜಿಪೆ

ತ್ವರಿತದಿ ಹರಿ ಸರ್ವೋತ್ತಮನೆಂಬೊ
ಸರಸವಿಜ್ಞಾನವ ಸರಿ ಇಲ್ಲದೆ ಇತ್ತು
ಪರಿಪಾಲಿಸು ಎಂದು ಶಿರಸದಿ ನಮಿಪೆ
ಸರಿಯಾರಯ್ಯ ನಿನಗೆ ಸರಸಿಜಾಂಡದೊಳು
ಅರಸಿ ನೋಡಲು ಆರಾರು ಇಲ್ಲವೋ
ಕಾರುಣ್ಯಸಾಗರ ಕರುಣಿಸಿ ನೀ ಎನ್ನ
ಹರಿ ತಾ ಕರುಣಿಪೆನೆಂದು ಅರಿತು ನಿನ್ನಯ ದಿವ್ಯಚರಣ
ಸೇರಿದೆನಯ್ಯ ಸರಿ ಬಂದದ್ದು ಮಾದೊ
ಹರಿ  ಕುಲವರಿಯನೆ ಪರಿಪರಿ ಜನರನ್ನ ಪಾಲಿಸಿ ಎನ್ನನು
ದೂರದಿ ಇಟ್ಟರೆ ದೊರೆತನವೇನಯ್ಯ
ಸಾರುವೆ ಸಾರುವೆ ಸರಸಿಜನಾಭನ ಸುತನೆ
ಆರು ಮೂರೆರಡೊಂದು ಸಾವಿರ
ಮೂರೆರಡು ಶತ ಶ್ವಾಸ ಜಪಗಳನು
ಮೂರು ಜೀವರಲ್ಲಿ ನೀರಜ್ಜಕಲ್ಪ
ಪರಿಯಂತರ ಮಾಡಿ ಅವರವರ ಗತಿಯ
ಮರೆಯದೆ ನೀಡುವಿ ಗಿರಿಶನುತಪಾದ
ಗುರು **ಜಗನ್ನಾಥವಿಠಲನ್ನ** ಅರಿವಂತೆ ಮಾಡೊ ಧೀರ ॥